# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಯು.ಬಿ.ವೆಂಕಟೇಶ್**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 214**

**ಉತ್ತರಿಸಬೇಕಾದ ದಿನಾಂಕ : 13.09.2022**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಸೌಹಾರ್ದ ಸಹಕಾರ ಬ್ಯಾಂಕ್‌ಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿಯನ್ನು ನೀಡುವುದು) | ಕರ್ನಾಟಕ ರಾಜ್ಯದಲ್ಲಿ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997, 2001 ರಲ್ಲಿ ಚಾಲನೆಗೆ ಬಂದಿದ್ದು ಈ ಕಾಯ್ದೆಯ ಅವಕಾಶಗಳ ರೀತ್ಯಾ ಹೊಸದಾಗಿ ನೋಂದಣಿಯಾದ ಮತ್ತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಅವಕಾಶಗಳಡಿಯಲ್ಲಿ ಈಗಾಗಲೇ ನೋಂದಣಿಯಾಗಿ ಸೌಹಾರ್ದ ಕಾಯ್ದೆಗೆ ಪರಿವರ್ತನೆ ಮಾಡಿಕೊಂಡಿರುವ ಬ್ಯಾಂಕುಗಳು ಸೇರಿದಂತೆ ದಿನಾಂಕ:31.03.2022ರ ಅಂತ್ಯಕ್ಕೆ 18 ಬ್ಯಾಂಕುಗಳು ಇರುತ್ತವೆ, ಈ ಪೈಕಿ 18 ಸೌಹಾರ್ದ ಸಹಕಾರಿ ಬ್ಯಾಂಕುಗಳು ಸಹ ಕಾರ್ಯನಿರತವಾಗಿದ್ದು ಯಾವುದೇ ಸೌಹಾರ್ದ ಸಹಕಾರಿ ಬ್ಯಾಂಕುಗಳು ಸ್ಥಗಿತ ಅಥವಾ ಸಮಾಪನಾ ವ್ಯವಸ್ಥೆಯಲ್ಲಿ ಇರುವುದಿಲ್ಲ. ಇವುಗಳ ಜಿಲ್ಲಾವಾರು ವಿವರ ಈ ಕೆಳಕಂಡಂತಿವೆ. |

| ಕ್ರ.ಸಂ | ಜಿಲ್ಲೆಯ ಹೆಸರು | ಕಾರ್ಯನಿರತ ಬ್ಯಾಂಕುಗಳು |
|---|---|---|
| 1 | 2 | 3 |
| 1 | ಬೆಂಗಳೂರು | 04 |
| 2 | ಚಿತ್ರದುರ್ಗ | 02 |
| 3 | ತುಮಕೂರು | 01 |
| 4 | ಬೆಳಗಾವಿ | 02 |
| 5 | ಗದಗ | 02 |
| 6 | ವಿಜಯನಗರ | 02 |
| 7 | ಬಳ್ಳಾರಿ | 02 |
| 8 | ರಾಯಚೂರು | 01 |
| 9 | ಕೊಪ್ಪಳ | 02 |
| | ಒಟ್ಟು: | 18 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ರಾಜ್ಯದಲ್ಲಿರುವ ಸೌಹಾರ್ದ ಸಹಕಾರ ಬ್ಯಾಂಕ್‌ಗಳಲ್ಲಿ ಎಷ್ಟು ಬ್ಯಾಂಕುಗಳು ದಿವಾಳಿಯಾಗಿವೆ; ಇವುಗಳಲ್ಲಿರುವ ಠೇವಣಿದಾರರ ಸಂಖ್ಯೆ ಎಷ್ಟು; ಠೇವಣಿದಾರರು ಹೂಡಿಕೆ ಮಾಡಿರುವ ಮೊತ್ತ ಎಷ್ಟು; (ಜಿಲ್ಲಾವಾರು/ ಬ್ಯಾಂಕುವಾರು ಮಾಹಿತಿಯನ್ನು ನೀಡುವುದು) | ರಾಜ್ಯದ ಬೆಂಗಳೂರು ಜಿಲ್ಲೆಯಲ್ಲಿ ಶುಶ್ರುತಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಎಂಬ ಒಂದು ಬ್ಯಾಂಕ್ ಠೇವಣಿದಾರರ ಠೇವಣಿ ಮೊತ್ತವನ್ನು ಪಾವತಿಸಲು ಸಾಧ್ಯವಾಗದೆ ಸಂಕಷ್ಟದಲ್ಲಿ ಸಿಲುಕಿರುತ್ತದೆ. ಪ್ರಸ್ತುತ ಹಂತದಲ್ಲಿ ಇದು ದಿವಾಳಿಯಾಗಿದೆ ಎಂದು ಹೇಳಲಾಗುವುದಿಲ್ಲ. ಇದರಲ್ಲಿ ಅಂದಾಜು 15000 ಠೇವಣಿದಾರರಿಂದ ರೂ.180.77 ಕೋಟಿ ಠೇವಣಿ ಸಂಗ್ರಹಿಸಿದ್ದು, ಈ ಪೈಕಿ ರೂ.110.00 ಕೋಟಿ ಅವ್ಯವಹಾರವಾಗಿದೆ ಎಂದು ಗುರುತಿಸಲಾಗಿದೆ. ಈ ಅವ್ಯವಹಾರವಾಗಿರುವ ಮೊತ್ತವು ರಿಸರ್ವ್ ಬ್ಯಾಂಕ್ ಪರಿವೀಕ್ಷಣೆಗೆ ಒಳಪಡಿಸಿದಾಗ ಮತ್ತು ಠೇವಣಿದಾರರ ದೂರಿನ ಮೂಲಕ ಕಂಡುಬಂದಿರುವುದಾಗಿರುತ್ತದೆ. |
| ಇ) | ಯಾವ ಯಾವ ಸೌಹಾರ್ದ ಬ್ಯಾಂಕುಗಳಲ್ಲಿ ಎಷ್ಟೆಷ್ಟು ಮೊತ್ತದ ಅವ್ಯವಹಾರ ಕಂಡುಬಂದಿದೆ; ಅವ್ಯವಹಾರದಲ್ಲಿ ಭಾಗಿಯಾಗಿರುವ ವಿರುದ್ಧ ಸರ್ಕಾರ ಕೈಗೊಂಡಿರುವ | ಅವ್ಯವಹಾರಗಳು ಕಂಡು ಬಂದಿರುವ ಶುಶ್ರುತಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಂಗಳೂರು ಇದರ ವಿರುದ್ಧ ಕಾಯ್ದೆ ಕಲಂ-53(7)(U) ಅವಕಾಶಗಳ ರೀತ್ಯಾ ಸಂಯುಕ್ತ ಸಹಕಾರಿಯಿಂದ ಪರಿವೀಕ್ಷಣೆಗೆ ಒಳಪಡಿಸಲಾಗಿದೆ. ಬ್ಯಾಂಕಿಂಗ್ ರೆಗ್ಯುಲೇಷನ್ ಆಕ್ಟ್ 1949 ರ ಕಲಂ 35 (A) ರ ರೀತ್ಯಾ ಬ್ಯಾಂಕು ನಿಯಂತ್ರಿತ ವ್ಯವಹಾರ ನಡೆಸುವಂತೆ ಆರ್.ಬಿ.ಐ ನಿಂದ ನಿರ್ದೇಶನಗಳನ್ನು ನೀಡಲಾಗಿದೆ. ಅವ್ಯವಹಾರಕ್ಕೆ ಕಾರಣರಾದವರ ವಿರುದ್ಧ ಬೆಂಗಳೂರಿನ ರಾಜ್ಯ ಗೋಪಾಲನಗರ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ಸಂಖ್ಯೆ:0315/2022 ಸಂಜಯನಗರ |

| | | |
|---|---|---|
| | ಕ್ರಮಗಳೇನು; (ಸಂಪೂರ್ಣ ವಿವರವನ್ನು ನೀಡುವುದು) | ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ಸಂಖ್ಯೆ:0222/2022 ಮತ್ತು ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ಎಫ್ . ಐ. ಆರ್. ಸಂಖ್ಯೆ:0182/2022 ನ್ನು ದಾಖಲಿಸಲಾಗಿದೆ ಹಾಗೂ ಬ್ಯಾಂಕಿನ ಅಧ್ಯಕ್ಷರು ಒರ್ವ ನಿರ್ದೇಶಕರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿ ಪ್ರಸ್ತುತ ನ್ಯಾಯಾಂಗ ಬಂಧನದಲ್ಲಿದ್ದಾರೆ. |
| ಈ) | ಠೇವಣಿದಾರರ ಹಿತ ಕಾಪಾಡುವಲ್ಲಿ ಸರ್ಕಾರ ಯಾವ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಂಡಿದೆ. (ಸಂಪೂರ್ಣ ವಿವರವನ್ನು ನೀಡುವುದು) | ಈ ರೀತಿಯ ಬ್ಯಾಂಕುಗಳಲ್ಲಿ ಠೇವಣಿಯಾಗಿ ತೊಡಗಿಸಿರುವ ಠೇವಣಿದಾರರ ಹಿತ ಕಾಪಾಡಲು ಬ್ಯಾಂಕುಗಳು Depositor Insurance and credit guarantee corporation (DICGC) ಎಂಬ ಸಂಸ್ಥೆಯಲ್ಲಿ ನೋಂದಾಯಿಸಿಕೊಂಡು ಬ್ಯಾಂಕು ತಾನು ಸಂಗ್ರಹಿಸುವ ಠೇವಣಿಯ ಶೇ:1.2 ರಷ್ಟು ಮೊತ್ತವನ್ನು ಈ ಸಂಸ್ಥೆಯಲ್ಲಿ ವಾರ್ಷಿಕ ಪ್ರೀಮಿಯಂ ಪಾವತಿಸಬೇಕಾಗಿರುತ್ತದೆ. ಬ್ಯಾಂಕು ಠೇವಣಿದಾರರ ಠೇವಣಿಯನ್ನು ಹಿಂದಿರುಗಿಸಲು ವಿಫಲವಾದ ಸಂದರ್ಭದಲ್ಲಿ ಪ್ರತಿಯೊಬ್ಬ ಠೇವಣಿದಾರನಿಗೂ ಗರಿಷ್ಟ ರೂ.5.00/- ಲಕ್ಷಗಳವರೆಗೆ ಈ ಸಂಸ್ಥೆಯವರ ಮೂಲಕ ಪರಿಹಾರ ಪಡೆಯಲು ಅವಕಾಶಗಳಿವೆ.<br><br>ಸೌಹಾರ್ದ ಸಹಕಾರಿ ಸಂಸ್ಥೆಗಳಲ್ಲಿ ಠೇವಣಿ ತೊಡಗಿಸುವ ಠೇವಣಿದಾರರ ಹಿತ ಕಾಪಾಡುವ ಜವಾಬ್ದಾರಿ ಆ ಸಹಕಾರಿಯ ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳದ್ದೇ ಆಗಿರುತ್ತದೆ. ಸಂಯುಕ್ತ ಸಹಕಾರಿಯು ಇಲಾಖೆಗಿರುವ ಶಾಸನಬದ್ಧ ಅಧಿಕಾರಗಳನ್ನು ಹೊಂದಿದ್ದು, ಸೌಹಾರ್ದ ಸಹಕಾರಿಗಳನ್ನು ನಿಯಂತ್ರಿಸುತ್ತದೆ. ದಿ:01-01-2021ರಂದು ಸುತ್ತೋಲೆಯೊಂದನ್ನು ಹೊರಡಿಸಿ ಸಹಕಾರಿಯು ತಾನು ಸಂಗ್ರಹಿಸುವ ಒಟ್ಟು ಠೇವಣಿಯ ಶೇ:20 ರಷ್ಟನ್ನು ದ್ರವ್ಯಾಸ್ತಿಯಾಗಿ ನಿರ್ವಹಿಸಬೇಕು ಎಂದಿರುತ್ತದೆ. ಈ ರೀತಿ ನಿರ್ವಹಿಸಿರುವ ದ್ರವ್ಯಾಸ್ತಿಯಿಂದ ಠೇವಣಿದಾರರ ತಕ್ಷಣದ ಬೇಡಿಕೆಗಳನ್ನು ಪೂರೈಸಬಹುದಾಗಿರುತ್ತದೆ.<br><br>ಸೌಹಾರ್ದ ಸಹಕಾರಿಗಳ ಶಾಸನಬದ್ಧ ಲೆಕ್ಕ ಪರಿಶೋಧನೆಯನ್ನು ಪ್ರತಿ ಆರ್ಥಿಕ ವರ್ಷ ಪೂರ್ಣಗೊಂಡ 06 ತಿಂಗಳೊಳಗಾಗಿ ಕಾಯ್ದೆ ಕಲಂ 33 ರ ರೀತ್ಯಾ ನಡೆಸುವುದು ಕಡ್ಡಾಯವಾಗಿರುತ್ತದೆ. ಇದಲ್ಲದೆ ಕಾಯ್ದೆ ಕಲಂ 35ರ ರೀತ್ಯಾ ಶಾಸನಬದ್ಧ ವಿಚಾರಣೆ ನಡೆಸಲು ಸಹಕಾರ ಸಂಘಗಳ ನಿಬಂಧಕರಿಗೆ ಅಧಿಕಾರ ದತ್ತವಾಗಿರುತ್ತದೆ. ಈ ಕ್ರಮಗಳ ಮೂಲಕ ಸಹಕಾರಿಗಳಲ್ಲಿ ಠೇವಣಿದಾರರ ಠೇವಣಿ ದುರುಪಯೋಗವಾಗದಂತೆ ಮುನ್ನೆಚ್ಚರಿಕೆ ವಹಿಸಲು ಅವಕಾಶಗಳಿವೆ.<br><br>ಅಲ್ಲದೆ ಕಾಲ ಕಾಲಕ್ಕೆ ಮಾನ್ಯ ಸಹಕಾರ ಸಚಿವರ ಅಧ್ಯಕ್ಷತೆಯಲ್ಲಿ ಹಾಗೂ ಸಹಕಾರ ಸಂಘಗಳ ನಿಬಂಧಕರ ಅಧ್ಯಕ್ಷತೆಯಲ್ಲಿ ಸಂಯುಕ್ತ ಸಹಕಾರಿಯನ್ನು ಒಳಗೊಂಡಂತೆ ಸಭೆಗಳನ್ನು ನಡೆಸಿ ಠೇವಣಿದಾರರ ಹಿತ ಕಾಪಾಡುವಲ್ಲಿ ಇರುವ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚನೆಗಳನ್ನು ನೀಡಲಾಗುತ್ತಿದೆ. ದೂರುಗಳು ಪ್ರಾಪ್ತವಾದ ಕೂಡಲೇ ಸಂಯುಕ್ತ ಸಹಕಾರಿಯ ಮೂಲಕ ವಿಚಾರಣೆಗೆ ಒಳಪಡಿಸಿ ಕ್ರಮವಿಡಲಾಗಿದೆ.<br><br>ಈ ರೀತಿಯಾಗಿ ಸೌಹಾರ್ದ ಸಹಕಾರಿಗಳಲ್ಲಿ ಠೇವಣಿದಾರರ ಹಿತ ಕಾಪಾಡಲು ಸರ್ಕಾರಕ್ಕೆ ಇರುವ ಅವಕಾಶಗಳ ರೀತ್ಯಾ ಕ್ರಮಕ್ಕೆಗೊಳ್ಳಲಾಗಿದೆ. |

ಸಂಖ್ಯೆ: ಸಿಒ 98 ಸಿಆರ್‌ಸಿ 2022

**(ಎಸ್.ಟಿ.ಸೋಮಶೇಖರ್)**

ಸಹಕಾರ ಸಚಿವರು